ಕಳೆದ ೫ ತಿಂಗಳಿಂದ ಅವರಿಗೆ ಸಂಬಳ ದೊರೆಯುತ್ತಿಲ್ಲ. ಇದರಿಂದ ದೂರ ದೂರದ ಊರಿನಿಂದ ಬಂದು ದಂಡಿಯುತ್ತಿರುವ ಶಿಕ್ಷಕರಾದ ಅವರು ಶೋಚನೀಯ ಪರಿಸ್ಥಿತಿಗೆ ಒಳಗಾಗಿದ್ದಾರೆ. ವೇತನವನ್ನು ಪಡೆಯದೆ ಜೀವನ ನಿರ್ವಹಿಸುವುದು ಕಷ್ಟಕರವಾಗಿ ಉಪವಾಸ ಬೀಳುವ ದಾರುಣ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಮಾನವೀಯ ದೃಷ್ಟಿಯಿಂದ ಅವರಿಗೆ ಕೂಡಲೇ ವೇತನವನ್ನು ದೊರಕಿಸಲು ನೀವು ಸರ್ಕಾರಕ್ಕೆ ಆದೇಶವನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಈಗತಾನೇ ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಕೂಡಲೇ ಅಧಿಕಾರಿಗಳನ್ನು ಕರೆದು ಇವತ್ತು ಚರ್ಚೆಮಾಡಿ ನಾಳೆಯೊಳಗೆ ಏನು ತಾಂತ್ರಿಕ ಲೋಪ ಇಲ್ಲದೇ ಇದ್ದರೆ ಮತ್ತು ತಕರಾರು ಇಲ್ಲದೇ ಇದ್ದರೆ ಒಂದು ವಾರದಲ್ಲಿ ಹಣ ಬಿಡುಗಡೆ ಮಾಡುವುದಕ್ಕೆ ವಿವ್ಯಾಡು ಮಾಡುತ್ತೇನೆ.

(IX) ನಂಜನಗೂಡಿನಲ್ಲಿ ನೀರು ಸರಬರಾಜಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ

ಶ್ರೀ ಡಿ. ಟಿ. ಜಯಕುಮಾರ್.—ಮೈಸೂರು ಜಿಲ್ಲೆಯ ನಂಜನಗೂಡು ಕ್ಷೇತ್ರ ಯಾತ್ರಾ ಸ್ಥಳವಾಗಿದ್ದು ದಿನವೂ ಹೊರಗಡೆಯಿಂದ ಹೆಚ್ಚು ಅಂದರೆ ಸಾವಿರಾರು ಜನ ಬಂದು ಹೋಗುವ ಸ್ಥಳವಾಗಿದ್ದು ಅಲ್ಲಿಗೆ ಬರುವ ಜನ ನೀರಿಗಾಗಿ ಬಹಳ ಬವಣೆ ಪಡುತ್ತಿದ್ದಾರೆ. ಹಾಗೂ ಊರಿನ ಜನತೆಯೂ ಸಹಾ ನೀರಿಲ್ಲದೆ ಬಹಳ ಪರಿತಪಿಸುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ವಿದ್ಯುತ್ ಸರಬರಾಜು ಇಲ್ಲದೇ ಇರುವುದು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಸಂಬಂಧಪಟ್ಟ ಕೆ.ಇ.ಬಿ. ಅಧಿಕಾರಿಗಳಿಗೆ ಆದೇಶ ನೀಡಿ ೨೪ ಗಂಟೆಯೂ ವಿದ್ಯುತ್ ಸರಬರಾಜು ಮಾಡಿ ಜನರ ನೀರಿನ ಕಷ್ಟವನ್ನು ತಪ್ಪಿಸಂತ್ತಾರೆಂದು ನಾನು ನಂಬಿದ್ದೇನೆ. ಇದು ಸಾಧ್ಯವಾಗದಿದ್ದರೆ ಸೂಕ್ತ ಜನರೇಟರ್‌ನ್ನು ಸರ್ಕಾರವೇ ಖರೀದಿ ಮಾಡಿ ಕೊಟ್ಟು ಕ್ಷೇತ್ರದ ಮಹಾ ಜನತೆಗೆ ಉಪಕಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಹಾಗೂ ೨೫ನೇ ತಾರೀಖು ಅಲ್ಲಿ ರಥೋತ್ಸವ ಕೂಡಾ ಇರುವುದರಿಂದ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—(ವಿದ್ಯುಚ್ಛಕ್ತಿ ಮಂತ್ರಿ ಗಣಿ ಹಾಗೂ ಭೂ ವಿಜ್ಞಾನ ಖಾತೆ ಮಂತ್ರಿಗಳು) ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಿದ್ದು ಅದಕ್ಕೆ ತಕ್ಕಂತೆ ವಿದ್ಯುತ್ ದೊರಕುವಿಕೆ ಇಲ್ಲದೇ ಇರುವುದರಿಂದ ರಾಜ್ಯದಲ್ಲಿ ವಿದ್ಯುತ್ ಕೊರತೆ ತಲೆದೋರಿದೆ. ೧೯೮೪-೮೫ರಲ್ಲಿ ರಾಜ್ಯದ ಕಡಿತರಹಿತ ವಿದ್ಯುತ್ ಬೇಡಿಕೆ-೧೧೯೭ ದಶಲಕ್ಷ ಯೂನಿಟ್ಟುಗಳು. ೧೯೮೪-೮೫ರಲ್ಲಿ ದೊರೆಯಬಹುದಾದ ವಿದ್ಯುತ್ ನಿರೀಕ್ಷಿತ-೯೪೯ ದಶಲಕ್ಷ ಯೂನಿಟ್ಟುಗಳು. ಆದ್ದರಿಂದ ನಿರೀಕ್ಷಿತ ಖೋತ-೨೩೦ ದಶಲಕ್ಷ ಯೂನಿಟ್ಟುಗಳು ಈ ಖೋತವನ್ನು ಸರಿದೂಗಿಸಲು ಮತ್ತು ವಿದ್ಯುತ್ ಸರಬರಾಜನ್ನು ಸಂಸ್ಥಿತಿಯಲ್ಲಿಡಲು ಕೆಲವು ವೇಳೆ ವಿದ್ಯುತ್‌ನ್ನು ನಿಲ್ಲಿಸಲಾಗುತ್ತಿದೆ. ಇದರಿಂದಾಗಿ ನಂಜನಗೂಡಿನಲ್ಲಿ ವಾರದ ಹಲವು ದಿನಗಳಲ್ಲಿ ಎರಡು ಸಾರಿ ಅಂದರೆ ಅರ್ಧ ಗಂಟೆ ವಿದ್ಯುತ್ ಸರಬರಾಜಿನಲ್ಲಿ ತೊಡಕು ಉಂಟಾಗಿದೆ. ಆದರೆ ದಿನದ ಮಿಕ್ಕಿದ ವೇಳೆಯಲ್ಲಿ ವಿದ್ಯುತ್ ಇರುತ್ತದೆ.

ಮಾನ್ಯ ಸದಸ್ಯರಿಗೆ ತಿಳಿದಂತೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿದ್ಯುತ್‌ನ್ನು ಸಮನಾಗಿ ಹಂಚಲು ಕೆಲವು ವೇಳೆಯಲ್ಲಿ ಅಂದರೆ ಸಂಜಾರು ಅರ್ಧ ಗಂಟೆಯ ಕಾಲ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತಿರುವುದರಿಂದ ವಿದ್ಯುತ್‌ಚ್ಛಕ್ತಿ ಇಲ್ಲದ ವೇಳೆಯಲ್ಲಿ ನಂಜನಗೂಡು ನಗರ ಸಭೆಯವರು ನೀರಿನ ಟ್ಯಾಂಕ್‌ಗಳಲ್ಲಿ ಕಟ್ಟಿಸಿ ನೀರನ್ನು ಟ್ಯಾಂಕ್‌ಗಳಿಗೆ ಶೇಖರಿಸಿಕೊಂಡು ಉಪಯೋಗಿಸಿಕೊಳ್ಳಬಹುದು. ವಿದ್ಯುಚ್ಛಕ್ತಿ ಸರಬರಾಜು ಇದ್ದಾಗ ಮೋಟಾರು ಪಂಪುಗಳನ್ನು ಉಪಯೋಗಿಸಿ ನೀರನ್ನು ತೊಟ್ಟಿಗಳಲ್ಲಿ ಶೇಖರಿಸಬಹುದು. ನಂಜನಗೂಡು ಕ್ಷೇತ್ರಕ್ಕೆ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಹಾಗೂ ಪುರಸಭೆಯವರು ತೊಟ್ಟಿಗಳನ್ನು ಕಟ್ಟಿಸಿ ನೀರು ಶೇಖರಿಸಲು ಕ್ರಮ ಕೈಗೊಳ್ಳಬೇಕು.

ಸರ್ಕಾರ ನಂಜನಗೂಡಿನ ಪುರಸಭೆಗೆ ಸೂಕ್ತ ಜನರೇಟರನ್ನು ಕೊಂಡು ವಿದ್ಯುಚ್ಛಕ್ತಿ ಒದಗಿಸಲು ಸಾಧ್ಯವಾಗುವುದಿಲ್ಲ. ಹಾಗೆ ಮಾಡಿದರೆ ಪ್ರತಿಯೊಂದು ತಾಲ್ಲೂಕು ಹಾಗೂ ಜಿಲ್ಲಾ ಪುರಸಭೆಗಳು ಮತ್ತು ನಗರಸಭೆಗಳು ಇದೇ ರೀತಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಂತ್ತಾರೆ. ಆದರೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳಿಗೆ ಸೂಕ್ತ ಸಲಹೆನೀಡಿ ನೀರು ಸರಬರಾಜು ಮಾಡಲು ಬೇಕಾಗುವ ವಿದ್ಯುತನ್ನು

ಒದಗಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು. ಮಾನ್ಯ ಸದಸ್ಯರು ನಂಜನಗೂಡು ಪುರಸಭೆಯವರನ್ನು ಪ್ರೇರೇಪಿಸಿ ನೀರಿನ ತೊಟ್ಟಿಯನ್ನು ಕಟ್ಟಲು ಏರ್ಪಾಟು ಮಾಡಿದ್ದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ರೇವಣ್ಣ ಸಿದ್ದಯ್ಯನವರೇ, ನಿಮ್ಮ ವಿಷಯವನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು,—ಮಾನ್ಯ ದೇಶ್‌ಮುಖ್ ಅವರು ಎರಡು ಹೇಳಿಕೆಗಳನ್ನು ಮಾಡಿದರು ಅವರು ಯಾವ ಭಾಷೆಯಲ್ಲಿ ಹೇಳಿಕೆ ಕೊಟ್ಟರು ಎಂಬುದನ್ನು ಮಾನ್ಯ ಅಧ್ಯಕ್ಷರು ಹೇಳಬೇಕು. ಇಲ್ಲ ಹಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಬಿಜಾಪುರದ ಕಡೆಯ ಕನ್ನಡ ಭಾಷೆ.

X) ತುಂಗಭದ್ರಾ ನೀರನ್ನು ಒದಗಿಸುವ ಬಗ್ಗೆ

ಶ್ರೀ ರೇವಣಸಿದ್ದಯ್ಯ —ಅಧ್ಯಕ್ಷರೇ, ತುಂಗಭದ್ರಾ ನೀರನ್ನು ಪ್ರತಿ ವರ್ಷ ಬಿಡುವಂತೆ ಈ ವರ್ಷ ಬೆಳೆಗಳಿಗೆ ಬಿಡುತ್ತಾ ಇಲ್ಲ ಇದರಿಂದಾಗಿ ಸುಮಾರು ೫ ಲಕ್ಷ ಎಕರೆಯಲ್ಲಿ ಬೆಳೆ ಒಣಗುತ್ತಾ ಇದೆ. ಅದೂ ಅಲ್ಲದೆ ೨೦ ಪರ್ಸೆಂಟ್ ನೀರನ್ನು ಸಹಾ ಕಟ್ ಮಾಡಿದ್ದಾರೆ. ಈಗ ಇರುವ ನೀರಿನಲ್ಲಿ ಮೇ ೧೦ನೇ ತಾರೀಖಿನವರೆಗೆ ನೀರನ್ನು ಸರಬರಾಜು ಮಾಡಲು ಆಗುತ್ತದೆಯೇ ಎಂಬುದೇ ಅನುಮಾನವಾಗಿದೆ ಈ ಕಾರಣದಿಂದ ಭದ್ರಾ ನೀರನ್ನು ತುಂಗಭದ್ರಾಗೆ ಬಿಟ್ಟು ಈ ಜನರಿಗೆ ನೀರನ್ನು ಪೂರೈಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತುಂಗಭದ್ರಾ ಜಲಾಶಯದಲ್ಲಿ ನೀರು ಕಡಿಮೆ ಇರುವುದು ನಿಜ. ಆದ್ದರಿಂದ ಬೇಗನೆ ಮಳೆ ಬರಲಿ ಎಂದು ದೇವರನ್ನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಭದ್ರಾದಲ್ಲಿನ ನೀರನ್ನು ಬಿಡಿ ಎಂದು ಹೇಳಿದ್ದಾರೆ. ಆದರೆ ಆಲ್ಲಿರತಕ್ಕ ಬೆಳೆಯನ್ನು ರಕ್ಷಣೆ ಮಾಡಿಕೊಂಡು ಆಮೇಲೆ ನಾವಡಕೂ ನೀರು ಸಿಕ್ಕಿದರೆ ಅದನ್ನು ಬಿಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆಂದು ಸಹಾ ಮೊನ್ನೆ ಹೇಳಿದ್ದೇನೆ. ಹಾಗೂ ಆಂಧ್ರಾದವರೂ ಸಹಾ ಕುಡಿಯುವುದಕ್ಕೆ ನೀರನ್ನು ಕೊಡಿ ಎಂದು ಕೇಳುತ್ತಿದ್ದಾರೆ ಹಾಗೂ ಬಳ್ಳಾರಿ ಮತ್ತು ರಾಯಚೂರಿನವರೂ ನಗರಕ್ಕೆ ನೀರುಬೇಕೆಂದು ಹೇಳುತ್ತಿದ್ದಾರೆ. ಆದುದರಿಂದ ಇವೆಲ್ಲಾ ಪರಿಶೀಲನೆಯ ಹಂತದಲ್ಲಿ ಇದ್ದು ಎಷ್ಟು ನೀರನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಯೋಚನೆ ಮಾಡುತ್ತದೆ.

XI) ಕಿತ್ತೂರು ರೈಲಿನಲ್ಲಿ ಸಬ್‌ಇನ್ಸ್‌ಪೆಕ್ಟರ್‌ರವರ ಅಸಭ್ಯ ವರ್ತನೆ

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಿಯಮ ೩೩೯ರ ಕೆಳಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ ಮೊನ್ನೆ ದಿವಸ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುವ ಸಮಯದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ನಡೆದುಕೊಂಡ ರೀತಿಯನ್ನು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಪಕ್ಕದ ಕಂಪಾರ್ಟ್‌ಮೆಂಟ್‌ನಲ್ಲಿ ರಾತ್ರಿ ಸಿಕ್ಕಾಪಟ್ಟೆ ಕುಡಿದು ಅಲ್ಲಿ ಇದ್ದ ನಾಗರಾಜಯ್ಯ ಎಂಬ ಟಿ.ಟಿ.ಯೇ ಗಲಾಟೆ ಮಾಡಿ ಅವರಿಗೆ ಹೊಡೆದು ಅವರಿಗೆ ರಕ್ತ ಬರುತ್ತಾ ಇತ್ತು. ಆಗ ನಾವು ಅಲ್ಲಿ ಹೋಗಿ ಗಲಾಟೆ ಮಾಡಲಿಲ್ಲ ಆತ ಹೆಚ್ಚು ಕುಡಿದಿದ್ದರಿಂದ ವಾಂತಿ ಸಹಾ ಮಾಡಿಕೊಂಡರು ನಾವು ಹೋಗಿ ಕೇಳಿದಾಗ ಸರಿಯಾಗಿ ಉತ್ತರ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಆ ಗಲಾಟೆಯ ಸಮಯದಲ್ಲಿ ಜನ ರೈಲನ್ನು ಸಹಾ ತಡೆದರು. ಆಗ ಅವರನ್ನೆಲ್ಲಾ ಸಮಾಧಾನ ಮಾಡಿ ರೈಲು ಬೆಂಗಳೂರು ತಲುಪಲು ಅನುವು ಮಾಡಿದೆವು. ಬೆಂಗಳೂರಿಗೆ ಬಂದಮೇಲೆ ಡಿ.ಐ.ಜಿ. ವಿಶ್ವನಾಥ್ ಅವರಿಗೆ ವಿಷಯ ವಿವರಿಸಲಾಗಿ ಅವರು ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆಂದಷ್ಟೇ ಹೇಳಿದರು. ಒಬ್ಬ ಪೋಲೀಸ್ ಅಧಿಕಾರಿ ಈರೀತಿ ಕುಡಿದು ಗೊಂದಲ ಮಾಡುವುದು ಸರಿಯೇ ? ಅದೂ ಆ ಕಂಪಾರ್ಟ್‌ಮೆಂಟಿನಲ್ಲಿ ಹೆಣ್ಣು ಮಕ್ಕಳೂ ಸಹ ಪ್ರಯಾಣ ಮಾಡುತ್ತಿದ್ದರು. ಈಗ ಆ ಅಧಿಕಾರಿಯಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ಅವರನ್ನು ಸಸ್ಪೆಂಡ್ ಮಾಡಿ ಇನ್‌ವೆಸ್ಟಿಗೇಷನ್ ಮಾಡಲಾಗುತ್ತಿದೆಯೇ ಎಂಬುದನ್ನು ಮಾನ್ಯ ಗೃಹ ಮಂತ್ರಿಗಳು ತಿಳಿಸಬೇಕು

ಶ್ರೀ ಬಿ. ರಾಚಯ್ಯ.—ಕಿತ್ತೂರು ರೈಲಿನಲ್ಲಿ ಪ್ರಯಾಸ ಮಾಡುವಾಗ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಕುಡಿದು ಅಲ್ಲಿನ ಟಿ.ಟಿ.ಇ. ಮೇಲೆ ಹಲ್ಲೆ ಮಾಡಿದರು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ